ಪ್ರಾಸಾ-1 ರವರನ್ನು ದಿನಾಂಕ **28.06.2018** ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**ಪಾಟೀಸವಾಲುಃ ಆರೋಪಿ**ಯ ಪರ ಶ್ರೀ ಡಿಜೆಪಿ **ವಕೀಲರಿಂದಃ**

ಹಾಸನ ಲೋಕಾಯುಕ್ತ ಕಚೇರಿಯಿಂದ ಆರೋಪಿ ಮನೆಗೆ ಹೋಗಲು ಆರು ಜನ ಸಾಕ್ಷಿದಾರರೆಲ್ಲರೂ ಒಟ್ಟಾಗಿ ಹೋದೆವು ಎಂದರೆ ಸರಿ . ನಮ್ಮ ಆರು ಜನರ ಪೈಕಿ ನನ್ನನ್ನು ಮತ್ತು ಸಾಕ್ಷಿ ಭಾರತಿಯವರನ್ನು ಆರೋಪಿ ಮನೆಯಲ್ಲಿ ಬಿಟ್ಟು ಇಬ್ಬರನ್ನು ಆರೋಪಿಯ ಮಗ ನಡೆಸುತ್ತಿದ್ದ ಫ್ಯಾನ್ಸಿಸ್ಟೋರಿಗೆ ಕಳುಹಿಸಿದರು ಮತ್ತು ಉಳಿದ ಇಬ್ಬರು ಸಾಕ್ಷಿದಾರರನ್ನು ಆರೋಪಿಯ ಹೆಂಡತಿ ನಡೆಸುತ್ತಿದ್ದ ಹಣಕಾಸು ಸಂಸ್ಥೆಗೆ ಕಳುಹಿಸಿದರು ಎಂದರೆ ಸರಿ. ಮೇಲ್ಕಂಡ ಫ್ಯಾನ್ಸಿಸ್ಟೋರ್ ಮತ್ತು ಹಣಕಾಸು ಸಂಸ್ಥೆ ಇವುಗಳಿಗೆ ಹೋಗಿ ಅಲ್ಲಿ ನಡೆದಂತಹ ನಡವಳಿಕೆಗಳನ್ನೆಲ್ಲಾ ಮಾಡಿಕೊಂಡು ಬಂದು ನಾವಿದ್ದ ಆರೋಪಿ ಮನೆಯಲ್ಲಿ ಎಲ್ಲಾ ಮಹಜರಗಳನ್ನು ಲ್ಯಾಪಟಾಪ್ ನಲ್ಲಿ ಟೈಪ್ ಮಾಡಿ ಪ್ರಿಂಟ್ ತೆಗೆಯಲಾಯಿತು ಎಂದರೆ ಆರೋಪಿ ಮನೆಯಲ್ಲಿ ನಡೆದ ನಡವಳಿಕೆಯ ಬಗ್ಗೆ ನನಗೆ ಗೊತ್ತಿದೆ, ಫ್ಯಾನ್ಸಿ ಸ್ಟೋರ್ ಮತ್ತು ಹಣಕಾಸು ಸಂಸ್ಥೆಯಲ್ಲಿ ನಡೆದ ನಡವಳಿಕೆಗಳ ಬಗ್ಗೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಫ್ಯಾನ್ಸಿಸ್ಟೋರ್ ಮತ್ತು ಹಣಕಾಸು ಸಂಸ್ಥೆಯಿಂದ ದಾಖಲೆಗಳನ್ನು ಆರೋಪಿ ಮನೆಗೆ ತಂದರು ಎಂದು ನುಡಿದಿದ್ದಾರೆ. ನಾನು ಆ ನಂತರ ಮೂರು ಸ್ಥಳಗಳಲ್ಲಿ ನಡೆದ ಪ್ರಕ್ರಿಯೆಗಳ ಬಗ್ಗೆ ನಿಪಿ-7 ರಿಂದ ನಿಪಿ-13 ಕ್ಕೆ ಮಾರನೇ ದಿನ ಲೋಕಾಯುಕ್ತ ಕಚೇರಿಯಲ್ಲಿ ನನ್ನ ರುಜುಗಳನ್ನು ಮಾಡಿದ್ದೇನೆ ಎಂದರೆ ಸುಳ್ಳು. ಸಾಕ್ಷಿ ಆರೋಪಿ ಮನೆಯಲ್ಲಿ ನಡೆದಂತಹ ನಡವಳಿಕೆಗಳಿಗೆ ಮಾತ್ರ ಆರೋಪಿ ಮನೆಯಲ್ಲಿಯೇ ರುಜು ಮಾಡಿದ್ದೇನೆ ಎನ್ನುತ್ತಾರೆ. ನಾನು ಆರೋಪಿ ಮನೆಯಲ್ಲಿ ರುಜು ಮಾಡಿದ ದಾಖಲೆಗಳಿಗೆ ಅದರಲ್ಲಿ ಏನು ಬರೆದಿದೆ ಎಂದು ತಿಳಿದುಕೊಂಡು ರುಜು ಮಾಡಿದ್ದೇನೆ. ಆರೋಪಿ ಮನೆಯಲ್ಲಿದ್ದ ಸಂಬಂಧಿಕರನ್ನು ಕರೆದು ಮಹಜರ್ ಗಳಿಗೆ ರುಜು ಮಾಡಿ ಎಂದು ಪೊಲೀಸರು ಕೇಳಲಿಲ್ಲ. ಅದೇ ರೀತಿ ಆರೋಪಿ ಮನೆಯ ಅಕ್ಕಪಕ್ಕದವರನ್ನು ಕರೆಯಿಸಿ ಮಹಜರ್ ಗಳಿಗೆ ರುಜು ಮಾಡಿಸಲಿಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

***ಓ.ಹೇ.ಕೇ.ಸ.ಇದೆ.***

***ಪ್ರಧಾನ ಜಿಲ್ಲಾ*** *ಮತ್ತು ಸೆಷನ್ಸ್ ಹಾಗೂ ಸ್ಪೆಷಲ್*
***ನ್ಯಾಯಾಧೀಶರು, ಹಾಸನ.***

ಪ್ರಾಸಾ-2 ರವರನ್ನು ದಿನಾಂಕ **28.06.2018** ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**ಪಾಟೀಸವಾಲುಃ ಆರೋಪಿ**ಯ ಪರ ಶ್ರೀ ಡಿಜೆಪಿ **ವಕೀಲರಿಂದಃ**

ಹಾಸನ ಲೋಕಾಯುಕ್ತ ಕಚೇರಿಯಿಂದ ಆರೋಪಿ ಮನೆಗೆ ಹೋಗಲು ಆರು ಜನ ಸಾಕ್ಷಿದಾರರೆಲ್ಲರೂ ಒಟ್ಟಾಗಿ ಹೋದೆವು ಎಂದರೆ ಸರಿ . ನಮ್ಮ ಆರು ಜನರ ಪೈಕಿ ನನ್ನನ್ನು ಮತ್ತು ಸಾಕ್ಷಿ ಪುಷ್ಪಾವತಿಯವರನ್ನು ಆರೋಪಿಯ ಮಗ ನಡೆಸುತ್ತಿದ್ದ ಫ್ಯಾನ್ಸಿ ಸ್ಟೋರಿಗೆ ಪೊಲೀಸ್ ಅಧಿಕಾರಿಗಳ ಜೊತೆ ಕಳುಹಿಸಿದರು ಎಂದರೆ ಸರಿ. ನಮ್ಮ ಜೊತೆ ಆರೋಪಿಯ ಮಗ ಮಂಜುನಾಥ ಸಹ ಫ್ಯಾನ್ಸಿಸ್ಟೋರಿಗೆ ಬಂದ ಎಂದರೆ ಸರಿ. ಮೇಲ್ಕಂಡ ಫ್ಯಾನ್ಸಿ ಸ್ಟೋರಿಗೆ ಆರೋಪಿಯ ಮಗನೇ ಮಾಲೀಕನೆಂದು ನನಗೆ ತಿಳಿದುಬಂತು. ಆ ಅಂಗಡಿಯಲ್ಲಿ ದೊರೆತ ದಾಖಲೆಗಳ ಪ್ರಕಾರ ಆ ಅಂಗಡಿಯ ಪರವಾನಿಗೆ ಆರೋಪಿಯ ಮಗನ ಹೆಸರಿನಲ್ಲಿದ್ದು ಆತನೇ ವ್ಯವಹಾರ ನಡೆಸುತ್ತಿದ್ದಾನೆಂದು ತಿಳಿದು ಬಂತು ಎಂದರೆ ಸರಿ. ಮೇಲ್ಕಂಡ ಅಂಗಡಿಯ ಅಕ್ಕಪಕ್ಕದ ಅಂಗಡಿಯವರನ್ನು ಕರೆಯಿಸಿ ಮಹಜರಿಗೆ ಸಾಕ್ಷಿದಾರರಾಗಿರಬೇಕೆಂದು ಪೊಲೀಸರು ಕೇಳಲಿಲ್ಲ. ಅಂಗಡಿಯಲ್ಲಿದ್ದ ವಸ್ತುಗಳ ಬೆಲೆಯನ್ನು ಪೊಲೀಸರೇ ನಿಗದಿ ಮಾಡಿದರು ಎಂದರೆ ನಾವು ಮತ್ತು ಪೊಲೀಸರು ಸೇರಿ ನಿಗದಿ ಮಾಡಿದೆವು ಎನ್ನುತ್ತೇನೆ. ಆ ದಿನ ಆ ಅಂಗಡಿಯಲ್ಲಿದ್ದ ವಸ್ತುಗಳ ಬಗ್ಗೆ ಸ್ಟಾಕ್ ರಿಜಿಸ್ಟರನ್ನು ಅಥವಾ ಬೇರೆ ಯಾವುದೇ ಕಡತಗಳಲ್ಲಿ ನಮೂದಾಗಿದೆಯೋ ಇಲ್ಲವೋ ಎಂಬುದನ್ನು ನಾವು ನೋಡಲಿಲ್ಲ. ಆ ಅಂಗಡಿಯಲ್ಲಿದ್ದ ದಾಖಲೆಗಳಲ್ಲಿ ಮೇಲ್ಕಂಡ ಯಾವುದೇ ವಸ್ತುಗಳು ಆರೋಪಿಯ ಹೆಸರಿನಲ್ಲಿರಲಿಲ್ಲ ಎಂದರೆ ಸರಿ. ಮೇಲ್ಕಂಡ ಅಂಗಡಿಯಿಂದ ನಾವು ಪೊಲೀಸರ ಜೊತೆ ಆರೋಪಿ ಮನೆಗೆ ಹೋದೆವು ಎಂದರೆ ಸರಿ. ಅಂಗಡಿಯಲ್ಲಿ ನಡೆದ ಎಲ್ಲಾ ಪ್ರಕ್ರಿಯೆಯನ್ನು ಆರೋಪಿ ಮನೆಗೆ ಬಂದ ಮೇಲೆ ಲ್ಯಾಪಟಾಪ್ ನಲ್ಲಿ ಟೈಪ್ ಮಾಡಲಾಯಿತು ಎಂದರೆ ಸುಳ್ಳು. ನಿಪಿ-7 ರಿಂದ ನಿಪಿ-13 ರಲ್ಲಿರುವ ದಾಖಲೆಗಳು ಮೇಲ್ಕಂಡ ಅಂಗಡಿಯಿಂದ ಅಮಾನತುಪಡಿಸಿದ ದಾಖಲೆಗಳಲ್ಲ ಎಂದರೆ ಸರಿ .

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

***ಓ.ಹೇ.ಕೇ.ಸ.ಇದೆ.***

***ಪ್ರಧಾನ ಜಿಲ್ಲಾ*** *ಮತ್ತು ಸೆಷನ್ಸ್ ಹಾಗೂ ಸ್ಪೆಷಲ್*
***ನ್ಯಾಯಾಧೀಶರು, ಹಾಸನ.***